

ಉತ್ತರ ಕರ್ನಾಟಕದ ಸಹ್ಯಾದ್ರಿ ಎಂದೇ ಪ್ರಸಿದ್ಧಿ ಪಡೆದ ಕಪ್ಪತಗುಡ್ಡದ ಮಡಿಲಿನಲ್ಲಿ ಪ್ರಕೃತಿ ಸೌಂದರ್ಯ ಸವಿಯುತ್ತಿರುವ ಪ್ರವಾಸಿಗರು



ಕಪ್ಪತಗುಡ್ಡ ಅರಣ್ಯ ಪ್ರದೇಶದಲ್ಲಿ ಕೃತಕವಾಗಿ ನಿರ್ಮಿಸಿರುವ ಹೊಂಡದಲ್ಲಿ ನೀರು ಕುಡಿಯುತ್ತಿರುವ ಕಾಡುಹಂದಿಗಳ ಹಿಂಡು

## ಗಣಿಗಾರಿಕೆ ನಡೆಯದಂತೆ ಜಾಗ್ರತೆ ವಹಿಸಬೇಕಿದೆ

ಮಧ್ಯ ಕರ್ನಾಟಕದ ಸಹ್ಯಾದ್ರಿ ಎನಿಸಿರುವ ಕಪ್ಪತಗುಡ್ಡ (ಕಪೋತಗಿರಿ) ಪ್ರದೇಶವು ಸಸ್ಯವೈವಿಧ್ಯ ಮತ್ತು ಜೀವವೈವಿಧ್ಯಗಳಿಂದ ಕೂಡಿದೆ. ಅಪಾರ ಖನಿಜ ಸಂಪತ್ತಿನ ಆಗರವೆನಿಸಿದೆ.

ಈ ಪ್ರದೇಶದ ರಕ್ಷಣೆಗಾಗಿ ನಮ್ಮ ಗುರುಗಳಾದ ಡಾ. ತೋಂಟದ ಸಿದ್ಧಲಿಂಗ ಸ್ವಾಮೀಜಿ ಪರಿಸರವಾದಿಗಳೊಂದಿಗೆ ಅವಿರತವಾಗಿ ಶ್ರಮಿಸಿದರು. ಅದರ ಪರಿಣಾಮ ಸರ್ಕಾರ ಈ ಪ್ರದೇಶವನ್ನು ವನ್ಯಜೀವಿಧಾಮ ಎಂದು ಘೋಷಿಸಿದೆ. ಆದರೂ, ಗಣಿಗಾರಿಕೆಯ ತೂಗುಗತ್ತಿ ನೇತಾಡುತ್ತಿದೆ.



ಕಪ್ಪತಗುಡ್ಡ ಜನರ ಜೀವನಾಡಿಯಾಗಿದ್ದು, ಇದರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಯಾವ ಕಾಲಕ್ಕೂ ಗಣಿಗಾರಿಕೆ ನಡೆಯದಂತೆ ಜಾಗ್ರತೆ ವಹಿಸಬೇಕು. ಪರಿಸರ ಉಳಿದರೆ ಮಾತ್ರ ಜೀವ ಸಂಕುಲ ಉಳಿಯುತ್ತದೆ. ಕಪ್ಪತಗುಡ್ಡವು ಪರಿಶುದ್ಧ ಗಾಳಿ ಹಾಗೂ ಮಳೆಯ ಮೂಲವಾಗಿರುವುದರಿಂದ ಇದನ್ನು ಸರ್ಕಾರ ಉಳಿಸಿ, ಬೆಳೆಸಿ ಅಭಿವೃದ್ಧಿಪಡಿಸಬೇಕು ಎಂಬುದು ಸಮಸ್ತ ಜನತೆಯ ಆಗ್ರಹವಾಗಿದೆ.

-ಡಾ. ಸಿದ್ಧರಾಮ ಸ್ವಾಮೀಜಿ
ತೋಂಟದಾರ್ಯ ಮಠ, ಗದಗ

ಅರಣ್ಯ ಇಲಾಖೆಯವರು ಅದನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಅದೇ ರೀತಿ ಇಲ್ಲಿನವರೂ ಲಂಟಾನಾವನ್ನು ಶೀಘ್ರವಾಗಿ ತೆಗೆಸಿ, ಮೂಲ ಸ್ವರೂಪ ಉಳಿಸಿ, ಜೀವವೈವಿಧ್ಯ ಕಾಪಾಡಲು ಕ್ರಮವಹಿಸಬೇಕಿದೆ. ಮುಂಗಾರು ಪ್ರವೇಶ ಆಗುತ್ತಿದ್ದು, ಎಲ್ಲೆಲ್ಲಿ ಬಯಲು ಇದೆಯೋ ಅಲ್ಲೆಲ್ಲಾ ಅರಣ್ಯ ಇಲಾಖೆಯವರು ಸಸಿಗಳನ್ನು ನೆಡಬೇಕು. ಇನ್ನೂ ಹೆಚ್ಚಿನದಾಗಿ ಮಳೆನೀರು ಸಂಗ್ರಹಣೆ, ಅರಣ್ಯ ವೃದ್ಧಿಗೆ ಕ್ರಮ ವಹಿಸಬೇಕಿದೆ ಎಂಬುದು ಅವರ ಒತ್ತಾಯವಾಗಿದೆ.

'ಕಪ್ಪತಗುಡ್ಡದಲ್ಲಿ ಔಷಧೀಯ ಸಸ್ಯಗಳ ಅಮೂಲ್ಯ ನಿಧಿಯೇ ಇದೆ. ಜೀವವೈವಿಧ್ಯ ಕೂಡ ದೊಡ್ಡ ಪ್ರಮಾಣದಲ್ಲಿದೆ. ಅವುಗಳನ್ನು ಸಂರಕ್ಷಿಸಬೇಕಿದೆ.

